ಸುರತ್ಕಲ್ ಕ್ಷೇತ್ರದ ಮೂಡುಶೆಡೆಯಲ್ಲಿರುವ ಕ್ಷಯರೋಗ ಆಸ್ಪತ್ರೆಯಲ್ಲಿರುವ ಎಕ್ಸರೆ ಯಂತ್ರದ ದುರಸ್ತಿ

891 - ಶ್ರೀಕುಂಬ್ಳೆ ಸುಂದರ ರಾವ್ (ಸುರತ್ಕಲ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸುರತ್ಕಲ್ಲು ಕ್ಷೇತ್ರದ ಮೂಡುಶೆಡ್ಡೆಯಲ್ಲಿರುವ ಕ್ಷಯರೋಗ ಆಸ್ಪತ್ರೆಯಲ್ಲಿರುವ ಎಕ್ಸರೇ ಯಂತ್ರ ಕೆಟ್ಟು ನಾಲ್ಕು ವರ್ಷವಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು ?

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಬಂದಿದೆ.

ಆ) ಮೂಡುಶೆಡ್ಡಿ ಟಿ.ಬಿ. ಆಸ್ಪತ್ರೆಯಲ್ಲಿರುವ ಕ್ಷ-ಕಿರಣವು ಬಹಳ ಹಳೆಯದಾಗಿದ್ದು ಅದನ್ನು ದುರಸ್ತಿ ಮಾಡಲು ಸಾಧ್ಯವಿಲ್ಲವೆಂದು ಮೂಲ ಸರಬರಾಜುದಾರರು ತಿಳಿಸಿರುತ್ತಾರೆ. ಈ ವಿಷಯದಲ್ಲಿ ಈಗಾಗಲೇ ಕ್ಷ-ಕಿರಣ ಯಂತ್ರಕ್ಕೆ ದರಗುತ್ತಿಗೆ ನಿಗಧಿಮಾಡಲು ನಿರ್ದೇಶನಾಲಯದಿಂದ ಕ್ರಮ ತೆಗೆದುಕೊಳ್ಳಲಾಗಿದೆ. ದರಗುತ್ತಿಗೆ ನಿಗಧಿಯಾದ ನಂತರ ಆ ಆಸ್ಪತ್ರೆಗೆ ಒಂದು ಕ್ಷ-ಕಿರಣ ಯಂತ್ರವನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗುವುದು. ತಾತ್ಕಾಲಿಕವಾಗಿ ಬೇರೆ ಯಾವುದಾದರೂ ಆಸ್ಪತ್ರೆಯಲ್ಲಿ ಹೆಚ್ಚುವರಿ ಕ್ಷ-ಕಿರಣವಿದ್ದಲ್ಲಿ ಅದನ್ನು ಮೂಡುಶೆಡ್ಡಿ ಟಿ.ಬಿ. ಆಸ್ಪತ್ರೆಗೆ ಸ್ಥಳಾಂತರಿಸುವ ಬಗ್ಗೆ ಪರಿಶೀಲಿಸಲಾಗುವುದು.

ಜಯದೇವ ಹೃದ್ರೋಗ ಸಂಸ್ಥೆ ಕುರಿತು.

893 - ಡಾ. ಎ.ಬಿ. ಮಾಲಕ ರೆಡ್ಡಿ (ಯಾದಗಿರಿ) : ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜಯದೇವ ಹೃದ್ರೋಗ ಸಂಸ್ಥೆಯಲ್ಲಿರುವ ಒಟ್ಟು ಸಿಬ್ಬಂಧಿಗಳೆಷ್ಟು; (ವರ್ಗಾವಾರು ವಿವರಗಳನ್ನು ಒದಗಿಸುವುದು);

ಆ) ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು (ವರ್ಗಾವಾರು ವಿವರ ನೀಡುವುದು)

ಇ) ಇತ್ತೀಚೆಗೆ ಜನವರಿಯಿಂದ ಜುಲೈ ಒಂದರವರೆಗೆ ಗುತ್ತಿಗೆ ಆಧಾರದ ಮೇಲೆ ನೇಮಿಸಿರುವ ಸಿಬ್ಬಂದಿ ಸಂಖ್ಯೆ ಎಷ್ಟು; (ವರ್ಗಾವಾರು ವಿವರಗಳನ್ನು ಒದಗಿಸುವುದು)

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) 392.

"ಎ" ವರ್ಗ - 70

"ಬಿ" ವರ್ಗ - 35

"ಸಿ" ವರ್ಗ - 189

"ಡಿ" ವರ್ಗ - 98

ಆ) 78.

"ಎ" ವರ್ಗ - 22

"ಬಿ" ವರ್ಗ - 14

"ಸಿ" ವರ್ಗ - 33

"ಡಿ" ವರ್ಗ - 9

ಇ) 30.

"ಎ" ವರ್ಗ - -

"ಬಿ" ವರ್ಗ - 13

"ಸಿ" ವರ್ಗ - 9

"ಡಿ" ವರ್ಗ - 8

ಸವನೂರು ತಾಲ್ಲೂಕುಗಳಲ್ಲಿ ಶಿಕ್ಷಕರ ಕೊರತೆ.

894 - ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಖಾಲಿ ಇರುವ ಪ್ರಾಥಮಿಕ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು)

ಆ) ಶಿಗ್ಗಾಂವ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು? ಅವುಗಳನ್ನು ಎಷ್ಟು ದಿನಗಳಲ್ಲಿ ತುಂಬಲಾಗುವುದು?

ಇ) ಒಂದು ತರಗತಿಗೆ ಒಬ್ಬ ಶಿಕ್ಷಕನಂತೆ ನೇಮಕ ಮಾಡಿಕೊಂಡಲ್ಲಿ ಇನ್ನು ಎಷ್ಟು ಶಿಕ್ಷಕರನ್ನು ರಾಜ್ಯದಲ್ಲಿ ಭರ್ತಿ ಮಾಡಬೇಕಾಗುತ್ತದೆ?

ಈ) ಸದರಿ ಶಿಕ್ಷಕರನ್ನು ಎಂದು ಭರ್ತಿ ಮಾಡಿಕೊಳ್ಳಲಾಗುವುದು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) 18,700 (ಜಿಲ್ಲಾವಾರುವಿವರವನ್ನು ಅನುಬಂಧದಲ್ಲಿ ನೀಡಿದೆ)